


ಪ್ರಶ್ನೆಗಳ ದಾರಿಯಲ್ಲಿ... 'ಕಿಂಗ್ಸ್ ಇಲೆವನ್ ಪಂಜಾಬ್' ಪರವಾಗಿ ಆಡುತ್ತಿರುವ ಕರ್ನಾಟಕದ ಕೆ.ಎಲ್. ರಾಹುಲ್ ಈ ಸಲ ವಿಶ್ವಕಪ್ ತಂಡಕ್ಕೆ ಆಯ್ಕೆಯಾಗಬಹುದೇ?

**ಐಪಿಎಲ್‌ನ ಸಿಕ್ಸರ್ ಸರದಾರರೇ ಬೇರೆ. ಕ್ರಿಸ್ ಗೇಲ್ ಹೆಸರಲ್ಲಿ 298 ಸಿಕ್ಸರ್‌ಗಳಿವೆ. ಮಾರ್ಚ್ 28ರಂದು ದೋನಿಯನ್ನು ಹಿಂದಿಕ್ಕಿದ ಡಿವಿಲಿಯರ್ಸ್ 198 ಸಿಕ್ಸರ್ ಸಿಡಿಸಿದ್ದಾರೆ. ಗೇಲ್ ಹಾಗೂ ಅವರ ನಡುವಿನ ದೊಡ್ಡ ಅಂತರ ಗಮನಿಸಿ. ದೋನಿ 187, ರೈನಾ 186, ರೋಹಿತ್ 185 ಸಿಕ್ಸರ್‌ಗಳನ್ನು ಮಾರ್ಚ್ 28ರವರೆಗೆ ತಮ್ಮ ಖಾತೆಗೆ ಹಾಕಿಕೊಂಡು ಬೀಗುತ್ತಿದ್ದಾರೆ.**




ಶೈಲಿಯಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಆ ಆಟದ ಮರ್ಮ ನೋಡಿ ಲೆಕ್ಕವಿಲ್ಲದಷ್ಟು ಶಾಲಾಮಕ್ಕಳು ಅದನ್ನು ತಮ್ಮದೇ ಇಂಪ್ರುವೈಸ್ಡ್ ಶಾಟ್ ಆಗಿ ಪರಿವರ್ತಿಸಿಕೊಂಡಿದ್ದೂ ಇದೆ. ಎಬಿ ಡಿಲಿವಿಲಿಯರ್ಸ್ ಹೊಡೆಯುವ ಅಕ್ರಾಸ್ ಶಾಟ್‌ಗಳು, ವಿಚಿತ್ರ ಪುಲ್‌ಗಳು ಯಾವುದೇ ಪುರಾತನ ಕೋಚ್ ಕಣ್ಣುಗಳನ್ನು ಕೆಂಪಗಾಗಿಸಬಹುದು. ಅಂತೆಯೇ ದೋನಿಯ ಹೆಲಿಕಾಪ್ಟರ್ ಶಾಟ್. ಮಹಾ ಸೋಮಾರಿಯಂತೆ ಪ್ರಕಟಗೊಳ್ಳುತ್ತಲೇ ಎತ್ತರೆತ್ತರಕ್ಕೆ ಸಿಕ್ಸರ್ ಹೊಡೆಯುವ ಕ್ರಿಸ್ ಗೇಲ್... ಇವರೆಲ್ಲರ ಆಟವನ್ನು ಕಂಡುಂಡು ಬೆಳೆದ ಕಂದ ರಿಷಭ್ ಪಂತ್. ಸಹಜವಾಗಿಯೇ ಎಲ್ಲವನ್ನೂ ತಲೆಗೆ ಬಿಟ್ಟುಕೊಂಡೇ ಅವರೀಗ ಕಣಕ್ಕಿಳಿದಿದ್ದಾರೆ. ಒಂದು ತಂಡದಲ್ಲಿ ಅವರು ಚಚ್ಚುತ್ತಿರುವಾಗ ಇನ್ನೊಂದು ತಂಡದ 'ಯುವಿ'ಯ ಅನುಭವಿ ಕಣ್ಣುಗಳು ಅರಳುತ್ತಿರುವುದು ಗಮನಿಸಬೇಕಾದ ವಿದ್ಯಮಾನ.

ಚುಟುಕು ಕ್ರಿಕೆಟ್ಟನ್ನು ತಾವು ಕ್ರೀಡಾಂಗಣಕ್ಕೆ ಹೋಗಿ ನೋಡುವುದಿಲ್ಲ ಎಂದು ಕ್ರಿಕೆಟ್ ಇತಿಹಾಸಕಾರ ರಾಮಚಂದ್ರ ಗುಹಾ ತಮ್ಮ ಎಷ್ಟೋ ಅಂಕಣಗಳಲ್ಲಿ ಬರೆದಿದ್ದಾರೆ. ಈ ಕ್ರಿಕೆಟ್ಟು ಇನ್ನೇನು ಮಾಡುವುದೋ ಎಂದು ಬಿ.ಎಸ್. ಚಂದ್ರಶೇಖರ್ ಪ್ರಶ್ನಾರ್ಹ ನೋಟ ಬೀರಿದ ನೆನಪೂ ಹಾಗೆಯೇ ಇದೆ. ಇತ್ತೀಚೆಗೆ ಮೊಹೀಂದರ್ ಅಮರ್‌ನಾಥ್ ಈ ಕ್ರಿಕೆಟ್ ನೋಡಿಕೊಂಡು ವಿಶ್ವಕಪ್ ತಂಡ ಆಯ್ಕೆಯಾಗಕೂಡದು ಎಂಬ ಅಭಿಪ್ರಾಯ ಹೊರಹಾಕಿದ್ದಾರೆ. ಹಾಗಿದ್ದೂ, ಭಾರತದ ನಾಲ್ಕನೇ

